# ಭೀಮ್ ಜನ್ಮಭೂಮಿ



ಸಮ ಸಮಾಜದ ಹಂಬಲವುಳ್ಳವರಿಗೆ ಅಂಬೇಡ್ಕರ್ ಅವರ ಜನ್ಮಭೂಮಿಯಾದ ಮಧ್ಯಪ್ರದೇಶದ 'ಮೋವ್' ಚುಂಬಕ ಸ್ಥಳ. ಅಲ್ಲಿನ ಸಂಗ್ರಹಾಲಯದಲ್ಲಿರುವ ಬಾಬಾ ಸಾಹೇಬರ ಬದುಕಿನ ಸ್ಮೃತಿಗಳು ಸಂವಿಧಾನ ಶಿಲ್ಪಿಯನ್ನು ಅರಿಯಲು ಹಾಗೂ ಸಮಾಜದ ಆರೋಗ್ಯದ ಬಗ್ಗೆ ಚಿಂತಿಸಲು ಪ್ರೇರೇಪಿಸುವಂತಿವೆ.

**ಡಿ.ಜಿ. ಮಲ್ಲಿಕಾರ್ಜುನ**



ಅಂಬೇಡ್ಕರ್ ಮತ್ತು ರಮಾಬಾಯಿ ಮೂರ್ತಿ

'ಮನುಷ್ಯನಾಗಿ ಹುಟ್ಟಿ ಕೇವಲ ಮಣ್ಣಿನ ಬೊಂಬೆಯಾಗಬಾರದು, ಹಟಹಿಡಿದು ಸಾಧಿಸಿದರೆ ಮತ್ತೊಬ್ಬ ಬ್ರಹ್ಮನಾಗಬಹುದು. ಸ್ವಯಂಕೃಷಿಯಿಂದ ಮನುಷ್ಯರು ಋಷಿಗಳಾಗಬಹುದು, ಮಹಾಪುರುಷರು ಆಗಬಹುದು. ಆಗ, ತಲೆಮಾರುಗಳು ನೆನಪಿಸಿಕೊಳ್ಳುವ ದೀಪವಾಗುವರು, ಅನಂತಜ್ಯೋತಿಯಾಗುವರು...'

ತೆಲುಗಿನಲ್ಲಿ ವೇಟೂರಿ ಅವರು ಬರೆದಿರುವ ಈ ಸಾಲುಗಳನ್ನು ಕೇಳಿದಾಗಲೆಲ್ಲ – ಮನಸ್ಸಿನಲ್ಲಿ ಡಾ. ಭೀಮರಾವ್ ಅಂಬೇಡ್ಕರ್ ಅವರನ್ನು ಕಲ್ಪಿಸಿಕೊಂಡು ಇದನ್ನು ಬರೆದಿರಬಹುದೇ ಅನಿಸುತ್ತದೆ.

ತಲೆತಲೆಮಾರುಗಳು ಕತ್ತಲಿನಿಂದ ಬೆಳಕಿನೆಡೆಗೆ ಸಾಗಲು, ಮುಂದಡಿಯಿಡಲು ಅನಂತಜ್ಯೋತಿಯಾಗಿ ಸದಾ ಉರಿಯುತ್ತಿರುವವರು ಡಾ. ಅಂಬೇಡ್ಕರ್. ಬಾಬಾ ಸಾಹೇಬರ ನೆನಪು ಮಧ್ಯಪ್ರದೇಶದ ಪ್ರವಾಸದಲ್ಲೂ ಹಿಂಬಾಲಿಸಿತು.

ಇಂದೋರ್ ಜಿಲ್ಲೆಯಲ್ಲಿನ 'ಮೋವ್'ಗೆ (ಡಾ. ಅಂಬೇಡ್ಕರ್ ನಗರಕ್ಕೆ) ಬಂದಿಳಿದಾಗ ಸಂಜೆಯಾಗುತ್ತಿತ್ತು. ಮುಳುಗುವ ಸೂರ್ಯನ ಬೆಳಕಿನಲ್ಲಿ 'ಭೀಮ್ ಜನ್ಮಭೂಮಿ' ಎಂಬ ಭವ್ಯ ಸ್ಮಾರಕದ ಮುಂದೆ ನಿಂತಾಗ, ಋಷಿಯಂತೆ ಸಾಧನೆ ಮಾಡಿದ ಮಹಾಪುರುಷನ ಜನ್ಮದ ಮಣ್ಣಿನ ಸ್ಪರ್ಶದಿಂದ ರೋಮಾಂಚನವಾಯಿತು.

'ಭೀಮ್ ಜನ್ಮಭೂಮಿ' ಎಂಬ ಸುಂದರವಾದ ಸ್ಮಾರಕವನ್ನು ಬಾಬಾಸಾಹೇಬರ ಸ್ಮರಣಾರ್ಥವಾಗಿ ಅವರ ಜನ್ಮಸ್ಥಳ ಮಧ್ಯಪ್ರದೇಶದ 'ಮೋವ್'ನಲ್ಲಿ ನಿರ್ಮಿಸಲಾಗಿದೆ. ಈ ಸ್ಮಾರಕವನ್ನು ಅಂಬೇಡ್ಕರ್ ಅವರ 100ನೇ ಜನ್ಮ ವಾರ್ಷಿಕೋತ್ಸವವಾದ 1991ರ ಏಪ್ರಿಲ್ 14ರಂದು ಅಂದಿನ ಮಧ್ಯಪ್ರದೇಶದ ಮುಖ್ಯಮಂತ್ರಿ ಸುಂದರ್ ಲಾಲ್ ಪಟ್ವಾ ಉದ್ಘಾಟಿಸಿದರು. ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆಯನ್ನು ಪ್ರತಿಬಿಂಬಿಸುವ ಈ ಸ್ಮಾರಕದ ವಾಸ್ತುಶಿಲ್ಪವನ್ನು ವಾಸ್ತುಶಿಲ್ಪಿ ಇ.ಡಿ. ನಿಮ್ಗಡೆ ರೂಪಿಸಿದ್ದಾರೆ. 2003ರಲ್ಲಿ ಸರ್ಕಾರ ಈ ಪಟ್ಟಣಕ್ಕೆ 'ಡಾ. ಅಂಬೇಡ್ಕರ್ ನಗರ' ಎಂದು ನಾಮಕರಣ ಮಾಡಿತು.

ಪ್ರತಿ ವರ್ಷದ ಅಂಬೇಡ್ಕರ್ ಜಯಂತಿಯಂದು ದೇಶದಾದ್ಯಂತ ಅನೇಕ ಜನರು 'ಮೋವ್'ಗೆ ಭೇಟಿ ನೀಡುತ್ತಾರೆ. ಇಲ್ಲಿನ ಸುಂದರವಾದ ಈ ಸ್ಮಾರಕದಲ್ಲಿ ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ವಸ್ತುಗಳು, ಛಾಯಾಚಿತ್ರಗಳು ಮತ್ತು ಸ್ಮರಣಿಕೆಗಳನ್ನು ಪ್ರದರ್ಶಿಸಲಾಗಿದೆ. ಅಂಬೇಡ್ಕರ್ ಕುರಿತಾದ ಪುಸ್ತಕಗಳಿರುವ ಗ್ರಂಥಾಲಯವಿದೆ. ಅಂಬೇಡ್ಕರ್, ರಮಾಬಾಯಿ, ಗೌತಮಬುದ್ಧ ಮುಂತಾದ ಪ್ರತಿಮೆಗಳಿವೆ.

ಅಂಬೇಡ್ಕರ್ ಮೂಲತಃ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಖೇಡ ತಾಲ್ಲೂಕಿನ ಅಂಬೇವಾಡೆಯವರು. ಅವರ ತಾತ ಮಾಲೋಜಿ ಸಕ್ಪಾಲ್ ದಂಪತಿಗೆ ಮೂವರು ಮಕ್ಕಳು. ಅದರಲ್ಲಿ ಒಬ್ಬರು ರಾಮ್ಜಿ ಮಾಲೋಜಿ ಸಕ್ಪಾಲ್. ರಾಮ್ಜಿ ಮಾಲೋಜಿ ಸಕ್ಪಾಲ್ ಮತ್ತು ಭೀಮಾಬಾಯಿ ದಂಪತಿಗೆ 14 ಮಕ್ಕಳು, ಅವರಲ್ಲಿ ಏಳು ಮಕ್ಕಳು ಸತ್ತು ಹೋದರು. ಉಳಿದ ಮಕ್ಕಳಲ್ಲಿ ಭೀಮರಾವ್ ರಾಮ್ಜಿ ಅಂಬೇಡ್ಕರ್ ಕೊನೆಯವರು.

ಭೀಮರಾವ್ ರಾಮ್ಜಿ ಅಂಬೇಡ್ಕರ್ ಅವರ ತಂದೆ ರಾಮ್ಜಿ ಮತ್ತು ತಾತ ಮಾಲೋಜಿ ಮಿಲಿಟರಿ ಸೆಂಡಿ (ಮೆಸೆಂಜರ್)ಯಲ್ಲಿದ್ದರು. ರಾಮ್ಜಿ ಆಟಗಳಲ್ಲಿ ನಿಪುಣ, ನೇರನುಡಿ ಮತ್ತು ಇಂಗ್ಲಿಷ್ ಬಲ್ಲವರಾಗಿದ್ದು, ಸುಬೇದಾರ್,